Aurigo : New Generation Technology And Software Company

ಆರಿಗೊ: ವಿಶಿಷ್ಟ ಸಾಫ್ಟ್‌ವೇರ್ ಸಂಸ್ಥೆ

ಆರಿಗೊ ಸಾಫ್ಟ್‌ವೇರ್ ಟೆಕ್ನಾಲಜೀಸ್‌ನ ಅಧ್ಯಕ್ಷ ಬಾಲಾಜಿ ಶ್ರೀನಿವಾಸನ್

ಮೂಲಸೌಕರ್ಯ ರಂಗದ ಯೋಜನೆಗಳಲ್ಲಿ ಕಾಮಗಾರಿಯ ಆರಂಭದಿಂದ ಅಂತ್ಯದವರೆಗೆ ಎಲ್ಲ ಮಾಹಿತಿಯನ್ನು ಕಂಪ್ಯೂಟರ್ ಮೂಲಕವೇ ಸ್ವಯಂಚಾಲಿತವಾಗಿ ನಿರ್ವಹಿಸುವ ವಿಶಿಷ್ಟ ಸಾಫ್ಟ್‌ವೇರ್ ಅನ್ನು ಬೆಂಗಳೂರು ಮೂಲದ 'ಆರಿಗೊ ಸಾಫ್ಟ್‌ವೇರ್ ಟೆಕ್ನಾಲಜೀಸ್' ಸಂಸ್ಥೆ ಅಭಿವೃದ್ಧಿ ಪಡಿಸಿದೆ. ಇದರಿಂದ ಕಾಮಗಾರಿಗಳ ವಿಳಂಬ, ಕಳಪೆ ಗುಣಮಟ್ಟ, ಭ್ರಷ್ಟಾಚಾರಗಳನ್ನು ತಡೆಯಲು ಸಾಧ್ಯ.

□ ಕೇಶವ ಜಿ. ಝಿಂಗಾಡೆ

ಬ್ಯಾಂಕಿಂಗ್, ಫೈನಾನ್ಸ್, ವಿಮೆ, ಷೇರು ಪೇಟೆ ವಹಿವಾಟು ನಿರ್ವಹಣೆಗೆ ಅಗತ್ಯವಾದ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆ. ಆದರೆ, ಮೂಲ ಸೌಕರ್ಯ ಮತ್ತು ನಿರ್ಮಾಣ ರಂಗದಲ್ಲಿ ಇಂತಹ ಸಾಫ್ಟ್‌ವೇರ್‌ಗಳನ್ನು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲಾಗಿಲ್ಲ. ಅಂತಹ ಕೊರತೆಯನ್ನು ಬೆಂಗಳೂರು ಮೂಲದ, ಕನ್ನಡಿಗ ಬಾಲಾಜಿ ಶ್ರೀನಿವಾಸನ್ ಅಧ್ಯಕ್ಷರಾಗಿರುವ ಆರಿಗೊ ಸಾಫ್ಟ್‌ವೇರ್ ಟೆಕ್ನಾಲಜೀಸ್ ತುಂಬಿ ಕೊಟ್ಟಿದೆ. ಈ ರಂಗದಲ್ಲಿನ ದೇಶದ ಏಕೈಕ ಅತಿ ದೊಡ್ಡ ಸಂಸ್ಥೆಯೂ ಇದಾಗಿದೆ. ಯೋಜನೆಯ ಅಂದಾಜು, ಗುತ್ತಿಗೆ, ಹಣಕಾಸು ಇವೆಲ್ಲವನ್ನು ಸ್ವಯಂಚಾಲಿತಗೊಳಿಸುವುದು ಈ ಸಾಫ್ಟ್‌ವೇರ್‌ನ ವಿಶೇಷತೆಯಾಗಿದೆ.

ಮೂಲ ಸೌಕರ್ಯ ರಂಗದ ಪ್ರತಿಯೊಂದು ನಿರ್ಮಾಣ ಯೋಜನೆಯಲ್ಲಿ ನೀಲ ನಕ್ಷೆ ಸಿದ್ಧಪಡಿಸುವ, ವಿನ್ಯಾಸ ರೂಪಿಸುವ, ಯೋಜನೆ ಕಾರ್ಯಗತಗೊಳಿಸುವ, ನಿರ್ವಹಣೆ– ಹೀಗೆ ಆರಂಭದಿಂದ ಮುಕ್ತಾಯದವರೆಗೆ ಅಗತ್ಯವಾದ ವಿಶಿಷ್ಟವಾದ ಸಾಫ್ಟ್‌ವೇರ್ ಅನ್ನು ಈ ಸಂಸ್ಥೆ ಒದಗಿಸುತ್ತಿದೆ. ಅಮೆರಿಕ, ಕೆನಡಾ, ಮಧ್ಯ ಏಷ್ಯಾದಲ್ಲಿ ಸೇವೆ ಒದಗಿಸುತ್ತಿದ್ದ ಸಂಸ್ಥೆ ಕಳೆದ ಎರಡು ವರ್ಷಗಳಿಂದ ಭಾರತದಲ್ಲಿಯೂ ಸೇವೆ ಒದಗಿಸಲು ಆರಂಭಿಸಿದೆ.

ಮೂಲ ಸೌಕರ್ಯಗಳಿಗೆ ಕೇಂದ್ರ ಸರ್ಕಾರವು ಜಿಡಿಪಿಯ ಶೇ 1ರಷ್ಟು ಮೊತ್ತ ಮೀಸಲು ಇರಿಸಿರುವುದರಿಂದ ಈ ರಂಗದಲ್ಲಿ ನಿರ್ಮಾಣ ಚಟುವಟಿಕೆಗಳು ಈಚೆಗೆ ಗಮನಾರ್ಹವಾಗಿ ಹೆಚ್ಚಳಗೊಂಡಿವೆ. ₹ 100 ಕೋಟಿಗಳ ಯೋಜನೆ ಕೈಗೆತ್ತಿಕೊಳ್ಳುವ ಸಂಸ್ಥೆಗಳು, ಗುತ್ತಿಗೆದಾರರಿಗೆ ಈಗ ₹ 1000 ಕೋಟಿಗಳಷ್ಟು ಯೋಜನೆಗಳು ಹುಡುಕಿಕೊಂಡು ಬರುತ್ತಿವೆ. ದಿಢೀರಾಗಿ ಹೆಚ್ಚಿದ ಇಂತಹ ಯೋಜನೆಗಳ ಹೆಚ್ಚಳವು ಹಲವಾರು ಸಮಸ್ಯೆಗಳನ್ನು ಸೃಷ್ಟಿಸಿದೆ.

ನಿಗದಿತ ಅವಧಿಯೊಳಗೆ ಈ ಯೋಜನೆಗಳನ್ನು ಹೇಗೆ ಮುಗಿಸಬೇಕು?, ಮಾನವ ಸಂಪನ್ಮೂಲ ಎಲ್ಲಿಂದ ತರಬೇಕು, ಗುಣಮಟ್ಟ ಕಾಯ್ದುಕೊಳ್ಳುವುದು ಹೇಗೆ? ಪಾರದರ್ಶಕತೆ ಸಾಧ್ಯವೇ? ಮುಂತಾದ ಸಮಸ್ಯೆಗಳು ಧುತ್ತನೆ ಎದುರಾಗಿವೆ. ಈ ಎಲ್ಲ ಸಂದೇಹಗಳಿಗೆ 'ಆರಿಗೊ ಸಾಫ್ಟ್‌ವೇರ್ ಟೆಕ್ನಾಲಜೀ' ಸಂಸ್ಥೆ ಬಳಿ ಸೂಕ್ತ ಉತ್ತರವಿದೆ.

ಸಾಮರ್ಥ್ಯಕ್ಕಿಂತ ಹೆಚ್ಚುವರಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಹೊಣೆ ಒಪ್ಪಿಕೊಂಡು ನಿಗದಿತ ವೇಳೆಯೊಳಗೆ ಪೂರ್ಣಗೊಳಿಸಲು ಸಾಧ್ಯವಾಗದೇ ಒದ್ದಾಡುವ ನಿರ್ಮಾಣ ಸಂಸ್ಥೆಗಳಿಗೆ ನಮ್ಮ ಬಳಿ ಪರಿಹಾರ ಇದೆ ಎಂದು ಸಂಸ್ಥೆಯ ಅಧ್ಯಕ್ಷ ಕನ್ನಡಿಗ ಬಾಲಾಜಿ ಶ್ರೀನಿವಾಸನ್ ಆತ್ಮವಿಶ್ವಾಸದಿಂದ ನುಡಿಯುತ್ತಾರೆ.

ನಿರ್ಮಾಣ ರಂಗ ಎದುರಿಸುತ್ತಿರುವ ಸವಾಲುಗಳೆಲ್ಲವನ್ನು ಸಮರ್ಪಕವಾಗಿ ನಿಭಾಯಿಸಲು ಗುತ್ತಿಗೆ ಮತ್ತು ನಿರ್ಮಾಣ ಸಂಸ್ಥೆಗಳ ಬಳಿ ಸೂಕ್ತ ತಂತ್ರಜ್ಞಾನ, ಮಾನವಸಂಪನ್ಮೂಲ ಇಲ್ಲ. ಹೀಗಾಗಿ ಗುತ್ತಿಗೆ ಸಂಸ್ಥೆಗಳು ಗುಣಮಟ್ಟದ ಜತೆ ರಾಜಿ ಆಗುತ್ತಿವೆ. ಯೋಜನೆಗಳು ಸಕಾಲಕ್ಕೆ ಪೂರ್ಣಗೊಳ್ಳುತ್ತಿಲ್ಲ. ವಿಳಂಬದ ಕಾರಣಕ್ಕೆ ಯೋಜನಾ ವೆಚ್ಚ ದುಪ್ಪಟ್ಟಾಗುತ್ತಿದೆ. ಈ ನಷ್ಟ ತಡೆಗೆ ಸಾಫ್ಟ್‌ವೇರ್ ಪರಿಹಾರ ನೀಡಬಲ್ಲದು ಎನ್ನುವುದು ಅವರ ಖಚಿತ ಅಭಿಪ್ರಾಯ.

ಅಮೆರಿಕದಲ್ಲಿ ಪ್ರತಿಯೊಂದು ಹಂತದಲ್ಲಿ ಕಂಪ್ಯೂಟರ್, ಸಾಫ್ಟ್‌ವೇರ್‌ಗಳ ಬಳಕೆ ಆಗುತ್ತದೆ. ಹೀಗಾಗಿ ಅಲ್ಲಿ ಯೋಜಿತ ರೀತಿಯಲ್ಲಿ ನಿರ್ಮಾಣ ಚಟುವಟಿಕೆಗಳು ಪೂರ್ಣಗೊಳ್ಳುತ್ತವೆ. ಅಂತಹ ಸೌಲಭ್ಯಗಳನ್ನು ಭಾರತದಲ್ಲಿಯೂ ಒದಗಿಸುವ ಉದ್ದೇಶದಿಂದ ಎರಡು ವರ್ಷಗಳಿಂದ ದೇಶಿ ಸಂಸ್ಥೆಗಳಿಗೆ ಸಾಫ್ಟ್‌ವೇರ್ ಸೇವೆ ಒದಗಿಸಲಾಗುತ್ತಿದೆ. ಸಂಸ್ಥೆಯು ವಿದ್ಯುತ್ ಸ್ಥಾವರ, ಬಂದರು, ಶಿಕ್ಷಣ ಮತ್ತು ಮೂಲ ಸೌಕರ್ಯಗಳ ಗುತ್ತಿಗೆ ಸಂಸ್ಥೆಗಳಿಗೆ ಸಾಫ್ಟ್‌ವೇರ್ ಸೇವೆ ಒದಗಿಸುತ್ತಿದೆ.

ನಿರ್ಮಾಣ ಚಟುವಟಿಕೆಯ ವಿವರಗಳನ್ನೆಲ್ಲ ಕಾಗದ ರೂಪದಲ್ಲಿ ದಾಖಲೆ ಇಡುವುದರಿಂದ ಏನೆಲ್ಲಾ ರಗಳೆಗಳು ಎದುರಾಗುತ್ತವೆ. ದಾಖಲೆ ತಿದ್ದುವ, ಕಡತಗಳು ಕಾಣೆಯಾಗುವಂತೆ ಮಾಡುವ, ಬೆಂಕಿ ಹಾಕಿ ದಾಖಲೆಗಳೇ ಇಲ್ಲದಂತೆ ಮಾಡುವ ಸಾಧ್ಯತೆಗಳು ಇದ್ದೇ ಇರುತ್ತವೆ. ಇವೆಲ್ಲವುಗಳಿಂದ ಯೋಜನೆ ಜಾರಿಯಲ್ಲಿ ಪಾರದರ್ಶಕತೆ ಇರಲಾರದು. ಕಾಮಗಾರಿಯು ಯಾವ ಹಂತದಲ್ಲಿ ಇದೆ ಎನ್ನುವುದೂ ಗೊತ್ತಾಗುವುದಿಲ್ಲ. ಇದರಿಂದ ಕಳಪೆ ಕಾಮಗಾರಿ ನಡೆಯುತ್ತದೆ. ಇಂತಹ ಸಮಸ್ಯೆಗಳಿಗೆಲ್ಲ ಈ ಸಂಸ್ಥೆಯ ಬಳಿ ಉತ್ತರ ಇದೆ.

ಯೋಜನೆಯೊಂದರ ವಿನ್ಯಾಸ, ಉತ್ಪಾದನಾ ವೆಚ್ಚ, ಮಾನವ ಸಂಪನ್ಮೂಲದ ಅಗತ್ಯ ಹೀಗೆ ನಿರ್ಮಾಣ ಪ್ರಕ್ರಿಯೆಯ ಉದ್ದಕ್ಕೂ ಈ ಸಂಸ್ಥೆಯ ಸಾಫ್ಟ್‌ವೇರ್ ನೆರವಿಗೆ ಬರುತ್ತದೆ. ಯಾವ ಯಾವ ಹಂತದಲ್ಲಿ ಏನೆಲ್ಲಾ ಬೆಳವಣಿಗೆಗಳಾಗಿವೆ. ಯಾವ ಯಾವ ದರ್ಜೆಯ ನಿರ್ಮಾಣ (ಸಿಮೆಂಟ್, ಉಕ್ಕು, ಮರಳು, ಜಲ್ಲಿ, ಡಾಂಬರು ಮುಂತಾದವು) ಸಾಮಗ್ರಿ ಬಳಸಲಾಗಿದೆ. ಯಾರ್‍ಯಾರು ಯಾವ ಯಾವ ಹಂತಗಳಲ್ಲಿ ಕಾಮಗಾರಿ ಅನುಮೋದಿಸಿದ್ದಾರೆ– ಹೀಗೆ ಕಾಮಗಾರಿಯ ಪ್ರತಿಯೊಂದು ವಿವರದ ಜಾಡು ಹಿಂಬಾಲಿಸಲು ಈ ಸಾಫ್ಟ್‌ವೇರ್ ನೆರವಾಗುತ್ತದೆ.

ಗುತ್ತಿಗೆ ಸಂಸ್ಥೆಗಳ ಯೋಜನಾ ಅಂದಾಜಿಗೆ ತಕ್ಕಂತೆ ತಿದ್ದುಪಡಿ ಮಾಡಿಕೊಳ್ಳಲು ಸಾಫ್ಟ್‌ವೇರ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಗುತ್ತಿಗೆದಾರರ ಅಗತ್ಯಕ್ಕೆ ತಕ್ಕಂತೆ ಸುಲಭವಾಗಿ ಸಿದ್ಧಪಡಿಸಲಾಗಿದೆ. ಆದರೆ, ಈ ಬದಲಾವಣೆಯ ಸಾಧ್ಯತೆಯು ಸಾಫ್ಟ್‌ವೇರ್ ರೂಪಿಸಿದ ಮೂಲ ಆಶಯಕ್ಕೆ ವ್ಯತಿರಿಕ್ತವಾಗಿರಲು ಅವಕಾಶ ಮಾಡಿಕೊಟ್ಟಿಲ್ಲ ಎಂದೂ ಬಾಲಾಜಿ ಸ್ಪಷ್ಟಪಡಿಸುತ್ತಾರೆ.

ಇದರಿಂದ ಯೋಜನೆ ಅನುಷ್ಠಾನದ ಯಾವುದೇ ಹಂತದಲ್ಲಿ ಅವ್ಯವಹಾರ, ಭ್ರಷ್ಟಾಚಾರ ನಡೆಯಲೂ ಅವಕಾಶ ಇರಲಾರದು. ಎಲ್ಲವೂ ಸಾಫ್ಟ್‌ವೇರ್ ಮೂಲಕ ಕಂಪ್ಯೂಟರ್‌ನಲ್ಲಿ ದಾಖಲಾಗುವುದರಿಂದ ಸರ್ಕಾರಿ ಸಂಸ್ಥೆಗಳ ವಿಶ್ವಾಸಾರ್ಹತೆ ಹೆಚ್ಚುತ್ತದೆ. ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಕಂಪ್ಯೂಟರ್‌ಗಳಲ್ಲಿನ ದಾಖಲೆಗಳನ್ನು ನಾಶ ಪಡಿಸುವ ಸಾಧ್ಯತೆಯೂ ಇಲ್ಲ. 'ಗೂಗಲ್ ಸರ್ಚ್' ಮಾದರಿಯಲ್ಲಿ ಇಲ್ಲಿ ಯೋಜನೆಯೊಂದರ ಪ್ರತಿಯೊಂದು ಮಾಹಿತಿಯನ್ನು ಶೋಧಿಸಬಹುದು.

ಸಾಫ್ಟ್‌ವೇರ್ ನಿರ್ವಹಣೆಗೆ ಮಾನವ ಸಂಪನ್ಮೂಲ ಇಲ್ಲದಿದ್ದರೂ ಪರಿಣತ ತಂತ್ರಜ್ಞರನ್ನೂ ಸಂಸ್ಥೆಯು ಒದಗಿಸುತ್ತಿದೆ. ನಿರ್ಮಾಣ ನಿರ್ವಹಣೆ ಮತ್ತು ಸಂಶೋಧನಾ ರಾಷ್ಟ್ರೀಯ ಸಂಸ್ಥೆ (ಎನ್‌ಐಸಿಎಂಎಆರ್) ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಬೆಂಗಳೂರಿನ 'ಸಿವಿಲ್ ಏಡ್' ನೆರವಿನಿಂದಲೂ ಮಾನವ ಸಂಪನ್ಮೂಲ ಒದಗಿಸಲಾಗುವುದು.

ಈ ಸಾಫ್ಟ್‌ವೇರ್ ಬಳಕೆಯಿಂದ ಯೋಜನಾ ವೆಚ್ಚಕ್ಕೆ ಕಡಿವಾಣ ಹಾಕುವುದರಿಂದ ಗುತ್ತಿಗೆ ಸಂಸ್ಥೆಗೆ ಶೇ 6ರಷ್ಟು ಉಳಿತಾಯ ಆಗಲಿದೆ. ಇದರಿಂದ ಒಟ್ಟಾರೆ ಶೇ 30ರಷ್ಟು ಲಾಭ ದೊರೆಯಲಿದೆ. ಯೋಜನೆ ಕಾರ್ಯಗತಗೊಳಿಸುವ ಅವಧಿಯಲ್ಲಿಯೂ ಶೇ 16ರಿಂದ ಶೇ 17ರಷ್ಟು ಉಳಿತಾಯ ಆಗಲಿದೆ.

ಕನಿಷ್ಠ ₹ 200 ಕೋಟಿ ವೆಚ್ಚದ ಯೋಜನೆಗಳಿಗೆ ಮಾತ್ರ ಈ ಸಾಫ್ಟ್‌ವೇರ್ ಬಳಸುವುದರಿಂದ ಪ್ರಯೋಜನವಾಗಲಿದೆ. ಇದಕ್ಕಿಂತ ಕಡಿಮೆ ಇದ್ದರೆ ಸಂಸ್ಥೆಗೆ ಹೆಚ್ಚು ಪ್ರಯೋಜನವಾಗಲಾರದು. ವಿದೇಶಗಳಲ್ಲಿ ಯೋಜನಾ ವೆಚ್ಚದ ಶೇ 1 ರಷ್ಟನ್ನು ಐ.ಟಿ ಉದ್ದೇಶಕ್ಕೆ ವೆಚ್ಚ ಮಾಡುತ್ತಾರೆ. ಭಾರತದಲ್ಲಿ ಶೇ 0.50ರಷ್ಟು ಮಾತ್ರ ವೆಚ್ಚ ಮಾಡುತ್ತಾರೆ. ಅಂದರೆ ₹ 200 ಕೋಟಿಗಳಿಗೆ ₹ 50 ಲಕ್ಷ ವೆಚ್ಚ ಮಾಡುತ್ತಾರೆ.

ಕಡಿಮೆ ಬಜೆಟ್‌ನ ನಿರ್ಮಾಣ ಸಂಸ್ಥೆಗಳಿಗೂ ಈ ಸಾಫ್ಟ್‌ವೇರ್ ಕೈಗೆಟುಕುವಂತೆ ಮಾಡಲು 'ಕ್ಲೌಡ್ ಕಂಪ್ಯೂಟರ್' ತಂತ್ರಜ್ಞಾನ ಜಾರಿಗೆ ತರಲು ಸಂಸ್ಥೆ ಉದ್ದೇಶಿಸಿದೆ. ₹ 25 ರಿಂದ 50 ಕೋಟಿ ವೆಚ್ಚದ ಕಾಮಗಾರಿ ನಿರ್ವಹಿಸುವ ಸಂಸ್ಥೆಗಳಿಗೂ ₹10 ಸಾವಿರದಷ್ಟು ತಿಂಗಳ ಬಾಡಿಗೆ ಲೆಕ್ಕದಲ್ಲಿ ಸಾಫ್ಟ್‌ವೇರ್ ಬಾಡಿಗೆ ನೀಡಲು ಬಾಲಾಜಿ ಶ್ರೀನಿವಾಸನ್ ನಿರ್ಧರಿಸಿದ್ದಾರೆ. ಅಮೆರಿಕದಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ. ಭಾರತದಲ್ಲಿಯೂ ಐದಾರು ತಿಂಗಳಲ್ಲಿ ಜಾರಿಗೆ ಬರಲಿದೆ ಎಂದು ಹೇಳುತ್ತಾರೆ.

ರಾಷ್ಟ್ರೀಯ ಹೆದ್ದಾರಿಯ ಮಹತ್ವಾಕಾಂಕ್ಷೆಯ ಯೋಜನೆಯಲ್ಲಿಯೂ ಈ ಸಾಫ್ಟ್‌ವೇರ್ ಅಳವಡಿಸಲು ಕೇಂದ್ರ ರಸ್ತೆ ಸಾರಿಗೆ ಸಚಿವ ಕಮಲ್‌ನಾಥ್ ಜೊತೆಗೂ ಚರ್ಚೆ ನಡೆಯುತ್ತಿದೆ. ಸಂಸ್ಥೆ ಅಭಿವೃದ್ಧಿಪಡಿಸಿರುವ 'ಬ್ರಿಕ್ಸ್' ಸಾಫ್ಟ್‌ವೇರ್ ಅನ್ನು ಗುತ್ತಿಗೆದಾರರು, ಸರ್ಕಾರ ಹೀಗೆ ಪ್ರತಿಯೊಬ್ಬರೂ ಬಳಸಬಹುದು. ಇದನ್ನು 8 ದೇಶಗಳಲ್ಲಿ ಮಾರಾಟ ಮಾಡಲಾಗುತ್ತಿದೆ ಎಂದು ಹೇಳುತ್ತಾರೆ.

ಎರಡು ವರ್ಷಗಳ ಹಿಂದೆ ಭಾರತದಲ್ಲಿ ವಹಿವಾಟು ಆರಂಭಿಸಲಾಗಿದ್ದು, ಒಟ್ಟು ವರಮಾನದಲ್ಲಿ ಶೇ 28ರಿಂದ 30 ವಹಿವಾಟು ಭಾರತದಿಂದಲೇ ಬರುತ್ತಿದೆ. ವಹಿವಾಟು ವಿಸ್ತರಣೆ ಉದ್ದೇಶಕ್ಕೆ 'ಐಪಿಒ' ಬಿಡುಗಡೆ ಮಾಡುವ ಆಲೋಚನೆ ಸದ್ಯಕ್ಕಿಲ್ಲ. ಸಣ್ಣ ಸಣ್ಣ ಸಂಸ್ಥೆಗಳನ್ನು ಸ್ವಾಧೀನಪಡಿಸಿಕೊಳ್ಳುವ ಆಲೋಚನೆ ಇದೆ. 2012ರಷ್ಟೊತ್ತಿಗೆ ₹ 200 ಕೋಟಿಗಳಷ್ಟು ವಹಿವಾಟು ನಡೆಸುವ ಗುರಿ ಹಾಕಿಕೊಳ್ಳಲಾಗಿದೆ ಎಂದೂ ಬಾಲಾಜಿ ಶ್ರೀನಿವಾಸನ್ ಹೇಳುತ್ತಾರೆ. ಸಂಸ್ಥೆಯ ಬಗ್ಗೆ ಹೆಚ್ಚಿನ ಮಾಹಿತಿಗೆ www.aurigo.com ತಾಣಕ್ಕೆ ಭೇಟಿ ನೀಡಬಹುದು. □